**All India Radio: Bangalore**
**National Bulletin In Kannada**
**21.07.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**21.07.2025 1.10 p.m.**
**<><><><>**

ಮುಖ್ಯಾಂಶಗಳು

೧. ಸಂಸತ್ ಮುಂಗಾರು ಅಧಿವೇಶನ ಆರಂಭ ; ವಿರೋಧ ಪಕ್ಷಗಳ ಗದ್ದಲದ ನಡುವೆ ಕಾರ್ಯಕಲಾಪ

೨. ಭಾರತದ ಮಿಲಿಟರಿ ಶಕ್ತಿಯ ಸಾಮರ್ಥ್ಯಕ್ಕೆ ಇಡೀ ಜಗತ್ತು ಸಾಕ್ಷಿ - ಪ್ರಧಾನಿ ನರೇಂದ್ರ ಮೋದಿ

೩. ೧೨.೪೧ ಶತಕೋಟಿ ಡಾಲರ್ ಮೌಲ್ಯದ ವಹಿವಾಟಿನೊಂದಿಗೆ ಭಾರತದ ವಿದ್ಯುನ್ಮಾನ ರಫ್ತು ಶೇಕಡ ೪೭ರಷ್ಟು ಬೆಳವಣಿಗೆ

೪. ಫಿಡೆ ಮಹಿಳಾ ಚೆಸ್ ವಿಶ್ವಕಪ್ ; ಕ್ವಾಟರ್ ಫೈನಲ್ ಟೈಬ್ರೇಕರ್ ಪಂದ್ಯದಲ್ಲಿಂದು ಭಾರತದ ದಿವ್ಯಾ ದೇಶ್‌ಮುಖ್, ಹರಿಕಾ ದ್ರೋಣವಲ್ಲಿ ಮುಖಾಮುಖಿ

><><><><><><><><

ಸಂಸತ್ತಿನ ಮುಂಗಾರು ಅಧಿವೇಶನ ಇಂದಿನಿಂದ ಆರಂಭವಾಗಿದ್ದು, ಲೋಕಸಭೆಯಲ್ಲಿ ಮೊದಲಿಗೆ ಇತ್ತೀಚೆಗೆ ನಿಧನ ಹೊಂದಿದ ೮ ಮಾಜಿ ಲೋಕಸಭಾ ಸದಸ್ಯರಿಗೆ ಗೌರವ ನಮನ ಸಲ್ಲಿಸಲಾಯಿತು. ಇದೇ ವೇಳೆ ಪಹಲ್ಗಾಮ್ ಭಯೋತ್ಪಾದಕ ದಾಳಿ ಹಾಗೂ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಸಾವನಪ್ಪಿದವರಿಗೂ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ಲೋಕಸಭಾ ಸದಸ್ಯರು, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಯಶಸ್ವಿ ಪಯಣವನ್ನು ಸಂಪನ್ನಗೊಳಿಸಿರುವ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲ ಅವರಿಗೆ ಅಭಿನಂದನೆ ಸಲ್ಲಿಸಿದರು. ನಂತರ ಲೋಕಸಭಾಧ್ಯಕ್ಷರು ಪ್ರಶ್ನೋತ್ತರ ಕಲಾಪವನ್ನು ಕೈಗೆತ್ತಿಕೊಂಡಾಗ ಕಾಂಗ್ರೆಸ್ ಎಸ್‌ಪಿ ಮತ್ತು ಡಿಎಂಕೆ ಸೇರಿದಂತೆ ವಿರೋಧಪಕ್ಷಗಳು ವಿವಿಧ

ವಿಚಾರಗಳನ್ನು ಮುಂದಿಟ್ಟುಕೊಂಡು ಘೋಷಣೆಗಳನ್ನು ಕೂಗಲಾರಂಭಿಸಿದರು. ಈ ವೇಳೆ ಲೋಕಸಭಾಧ್ಯಕ್ಷರು ಸುಗಮ ಕಲಾಪಕ್ಕೆ ಮನವಿ ಮಾಡಿದರೂ ಘೋಷಣೆಗಳು ನಿಲ್ಲದ ಪರಿಣಾಮ ಸದನವನ್ನು ೧೨ ಗಂಟೆಯವರೆಗೆ ಮುಂದೂಡಲಾಯಿತು. ಪ್ರಸ್ತುತ ಸದನದ ಕಾರ್ಯಕಲಾಪ ಮುಂದುವರೆದಿದೆ. ರಾಜ್ಯಸಭೆಯಲ್ಲಿ ಇಂದು ಸಭಾಪತಿ ಜಗದೀಪ್ ಧನ್‌ಕರ್ ಸಂಸತ್ತಿನ ಮೇಲ್ಮನೆಯ ಇಬ್ಬರು ಚುನಾಯಿತ ಮತ್ತು ಮೂವರು ನಾಮನಿರ್ದೇಶಿತ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು. ಎಜಿಪಿಯ ಬೀರೇಂದ್ರ ಪ್ರಸಾದ್ ಬೈಶ್ಯ ಮತ್ತು ಅಸ್ಸಾಂನ ಬಿಜೆಪಿಯ ಕಾನದ್ ಪುರ್ಕಾಯಸ್ಥ ಇಬ್ಬರು ಚುನಾಯಿತ ಸದಸ್ಯರಾಗಿದ್ದಾರೆ. ಡಾ. ಮೀನಾಕ್ಷಿ ಜೈನ್, ಸಿ ಸದಾನಂದನ್ ಮಾಸ್ಟರ್ ಮತ್ತು ಹರ್ಷವರ್ಧನ್ ಶ್ರಿಂಗ್ಲಾ ಪ್ರಮಾಣವಚನ ಸ್ವೀಕರಿಸಿದ ನಾಮನಿರ್ದೇಶಿತ ಸದಸ್ಯರಾಗಿದ್ದಾರೆ. ರಾಜ್ಯಸಭೆಯು ತನ್ನ ಕೊನೆಯ ಅಧಿವೇಶನದಿಂದ ಮಧ್ಯಂತರ ಅವಧಿಯಲ್ಲಿ ನಿಧನರಾದ ತನ್ನ ಏಳು ಮಾಜಿ ಸದಸ್ಯರಿಗೆ ಗೌರವ ನಮನ ಸಲ್ಲಿಸಿತು. ಬಳಿಕ ವಿರೋಧ ಪಕ್ಷಗಳ ಗದ್ದಲದ ನಡುವೆ ಸಭೆಯನ್ನು ೧೨ ಗಂಟೆಯವರೆಗೆ ಮುಂದೂಡಲಾಯಿತು. ರಾಜ್ಯಸಭೆಯಲ್ಲಿ ಪ್ರಸ್ತುತ ಪ್ರಶ್ನೋತ್ತರ ಕಲಾಪ ಮುಂದುವರೆದಿದೆ.

><><><><><><><><

ಭಾರತದ ಮಿಲಿಟರಿ ಶಕ್ತಿಯ ಸಾಮರ್ಥ್ಯಕ್ಕೆ ಇಡೀ ಜಗತ್ತು ಸಾಕ್ಷಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ೧೮ನೇ ಲೋಕಸಭೆಯ ಐದನೇ ಅಧಿವೇಶನದ ಮೊದಲ ದಿನವಾದ ಇಂದು, ಮುಂಗಾರು ಅಧಿವೇಶನದ ಆರಂಭಕ್ಕೂ ಮುನ್ನ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಈ ಮುಂಗಾರು ಅಧಿವೇಶನ ವಿಜಯೋತ್ಸವದ ಸಂಭ್ರಮಾಚರಣೆಯಾಗಿದೆ. ಆಪರೇಷನ್ ಸಿಂದೂರ್ ಅಡಿ ಭಾರತೀಯ ಸೇನೆ ನಿಗದಿಪಡಿಸಿದ್ದ ಗುರಿಯನ್ನು ಶೇಕಡ ೧೦೦ರಷ್ಟು ಸಾಧಿಸಲಾಗಿದೆ. ಹಾಗೂ ಕೇವಲ ೨೨ ನಿಮಿಷಗಳ ಅವಧಿಯಲ್ಲಿ ಭಯೋತ್ಪಾದನೆ ಹಿಂದಿನ ರುವಾರಿಗಳ ಮನೆಗಳ ನೆಲಸಮ ಮಾಡಲಾಗಿದೆ ಎಂದರು. ಭಾರತದ 'ಮೇಡ್ ಇನ್ ಇಂಡಿಯಾ' ಮಿಲಿಟರಿ ಶಕ್ತಿಯ ಹೊಸ ರೂಪಕ್ಕೆ ಇಡೀ ಜಗತ್ತು ಆಕರ್ಷಿತವಾಗಿದೆ. ಈ ಸಮಯದಲ್ಲಿ ಸದನ ಒಂದೇ ಧ್ವನಿಯಾಗಿ ಪ್ರತಿಧ್ವನಿಸಿದ್ದಲ್ಲಿ, ಅದು ದೇಶದ ಮಿಲಿಟರಿ ಸಾಮರ್ಥ್ಯಕ್ಕೆ ಪುಷ್ಠಿ ಮತ್ತು ನಾಗರಿಕರಿಗೆ ಸ್ಫೂರ್ತಿ ನೀಡಿ, ರಕ್ಷಣಾ ಸಂಶೋಧನೆ, ನಾವೀನ್ಯತೆ ಮತ್ತು ಉತ್ಪಾದನೆಗೆ ಚಾಲಕ ಶಕ್ತಿಯಾಗಬಲ್ಲದು ಎಂದು ಹೇಳಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ ( ೧೮ ಸೆಕೆಂಡುಗಳು)**

ದೇಶದ ಭದ್ರತಾ ಪಡೆಗಳು ಮಾವೋವಾದ ಮತ್ತು ನಕ್ಸಲ್‌ವಾದವನ್ನು ಬುಡ ಸಮೇತ ಕಿತ್ತೋಗೆಯುವ ಧ್ಯೇಯದೊಂದಿಗೆ ಯಶಸ್ಸಿನೆಡೆಗೆ ಅತಿವೇಗವಾಗಿ ಆತ್ಮ ವಿಶ್ವಾಸದೊಂದಿಗೆ ಮುನ್ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು. ಆರ್ಥಿಕತೆಯ ವಿಚಾರವಾಗಿಯೂ ೨೦೧೪ರಲ್ಲಿ ೧೦ನೇ ಜಾಗತಿಕ ಆರ್ಥಿಕತೆಯಾಗಿದ್ದ ಭಾರತ ಇಂದು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವತ್ತ ಧಾಪುಗಾಲಿಡುತ್ತಿದೆ ಎಂದು ಪ್ರಧಾನಿ ತಿಳಿಸಿದರು. ಇದೇ ವೇಳೆ ಪ್ರಧಾನಿ ಈ ಬಾರಿಯ ಮುಂಗಾರು ಅಧಿವೇಶನದಲ್ಲಿ ಫಲಪ್ರದ ಚರ್ಚೆಗಳು ನಡೆದು ದೇಶದ ಪ್ರಜಾಪ್ರಭುತ್ವ ಬಲಗೊಳ್ಳುವ ಆಶಯ ವ್ಯಕ್ತಪಡಿಸಿದರು ಹಾಗೂ ಸದನ ಸುಗಮವಾಗಿ ನಡೆಯಲು ಸಹಕರಿಸುವಂತೆ ಎಲ್ಲ ರಾಜಕೀಯ ಪಕ್ಷಗಳ ಸಂಸದರಲ್ಲಿ ಮನವಿ ಮಾಡಿದರು.

><><><><><><><><

ಮುಂಗಾರು ಅಧಿವೇಶನ ಆರಂಭಕ್ಕೂ ಮುನ್ನ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಜನರ ಆಕಾಂಕ್ಷೆಗಳ ಅಭಿವ್ಯಕ್ತಿ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆಗೆ ಎಲ್ಲಾ ಸದಸ್ಯರ ಸಾಮೂಹಿಕ ಪಾತ್ರ ಮುಖ್ಯವಾಗಿದೆ ಎಂದು ಹೇಳಿದ್ದಾರೆ. ರಚನಾತ್ಮಕ ಚರ್ಚೆಗಳು ಮತ್ತು ಆರೋಗ್ಯಕರ ಪ್ರಜಾಸತ್ತಾತ್ಮಕ ಸಂವಾದಕ್ಕೂ ಅವರು ಒತ್ತಾಯಿಸಿದರು, ಇದರಿಂದಾಗಿ ಸದನವು ಸಮಗ್ರ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಪ್ರಗತಿಗೆ ಅನುವು ಮಾಡಿಕೊಡುತ್ತದೆ ಎಂದು ಹೇಳಿದರು. ಈ ಮಳೆಗಾಲದ ಅಧಿವೇಶನವು ಅರ್ಥಪೂರ್ಣ ಮತ್ತು ಯಶಸ್ವಿಯಾಗಲಿದೆ ಮತ್ತು ಪ್ರಜಾಪ್ರಭುತ್ವ ಪ್ರಜ್ಞೆ, ವೈವಿಧ್ಯತೆಯಲ್ಲಿ ಏಕತೆ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುವ ಕಡೆಗೆ ಎಲ್ಲರೂ ಒಟ್ಟಾಗಿ ಅರ್ಥಪೂರ್ಣ ಕೊಡುಗೆ ನೀಡಲಿದ್ದಾರೆ ಎಂದು ಅವರು ಆಶಿಸಿದರು.

><><><><><><><><><

ಆಗಸ್ಟ್ ೨೧ರವರೆಗೆ ಮುಂದುವರಿಯಲಿರುವ ಈ ಅಧಿವೇಶನದಲ್ಲಿ ಒಟ್ಟು ೨೧ ದಿನ ಕಲಾಪಗಳು ನಡೆಯಲಿವೆ. ಆಪರೇಷನ್ ಸಿಂಧೂರ್‌ನ ನಂತರ ನಡೆಯುತ್ತಿರುವ ಮೊದಲ ಸಂಸತ್ ಅಧಿವೇಶನ ಇದಾಗಿದೆ.

><><><><><><><><

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಭಾರತ ೧೨.೪೧ ಶತಕೋಟಿ ಡಾಲರ್ ಮೌಲ್ಯದ ವಿದ್ಯುನ್ಮಾನ ಉತ್ಪನ್ನಗಳ ರಫ್ತಿನೊಂದಿಗೆ ಶೇಕಡ ೪೭ರಷ್ಟು ಬೆಳವಣಿಗೆ ಸಾಧಿಸಿದೆ. ಇದು ಭಾರತ ಜಾಗತಿಕ ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮುತ್ತಿರುವುದಕ್ಕೆ ಸ್ಪಷ್ಟ ಪ್ರತೀಕವಾಗಿದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ. ವಾಣಿಜ್ಯ ಸಚಿವಾಲಯದ ಪ್ರಕಾರ, ಭಾರತದ ವಿದ್ಯುನ್ಮಾನ ವಲಯಕ್ಕೆ ಅಮೆರಿಕ, ಯುಎಇ ಮತ್ತು ಚೀನಾ ಏಪ್ರಿಲ್‌ನಿಂದ ಜೂನ್‌ವರೆಗಿನ ತ್ರೈಮಾಸಿಕದಲ್ಲಿ ಅಗ್ರ ಮೂರು ಆಮದುದಾರ ರಾಷ್ಟ್ರಗಳಾಗಿವೆ. ನೆದರ್‌ಲ್ಯಾಂಡ್ ಮತ್ತು ಜರ್ಮನಿ ಭಾರತದಿಂದ ವಿದ್ಯುನ್ಮಾನ ಆಮದು ಮಾಡಿಕೊಳ್ಳುವ ಇತರ ಪ್ರಮುಖ ರಾಷ್ಟ್ರಗಳಾಗಿವೆ. ಈ ಬೆಳವಣಿಗೆ ಜಾಗತಿಕ ವಿದ್ಯುನ್ಮಾನ ಪೂರೈಕೆ ಸರಪಳಿಯನ್ನು ಭಾರತದ ಅಭಿವೃದ್ಧಿಯನ್ನು ಸೂಚಿಸುತ್ತದೆ. ಭಾರತದ ರಫ್ತಿನಲ್ಲಿ ಅಮೆರಿಕ ಸುಮಾರು ಶೇಕಡ ೬೦.೧೭ರಷ್ಟು ಸಿಂಹಪಾಲು ಹೊಂದಿದ್ದು, ಯುಎಇ ಶೇಕಡ ೮ ಹಾಗೂ ಚೀನಾ ಶೇಕಡ ೩.೮೮ ರಷ್ಟು ಪಾಲಿನೊಂದಿಗೆ ನಂತರದ ಸ್ಥಳದಲ್ಲಿವೆ. ಈ ದತ್ತಾಂಶ ಅಮೆರಿಕ, ಭಾರತದ ಸಿದ್ಧ ಉಡುಪುಗಳಿಗೆ ಪ್ರಮುಖ ಆಮದುದಾರ ರಾಷ್ಟ್ರವಾಗಿ ಮುಂದುವರಿದಿರುವುದನ್ನು ಸಾಬೀತುಪಡಿಸುತ್ತದೆ.

><><><><><><><><

ಕೊರಿಯಾ ಗಣರಾಜ್ಯಕ್ಕೆ ವಿದೇಶಾಂಗ ಸಚಿವರಾಗಿ ಹೊಸದಾಗಿ ನೇಮಕಗೊಂಡಿರುವ ಚೋ ಹ್ಯುನ್ ಅವರಿಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅಭಿನಂದನೆ ಸಲ್ಲಿಸಿದ್ದಾರೆ. ಸಚಿವ ಜೈಶಂಕರ್ ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್ನಲ್ಲಿ. ಉಭಯ ರಾಷ್ಟ್ರಗಳ ನಡುವಿನ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಹಾಗೂ ಒಟ್ಟಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ತಿಳಿಸಿದ್ದಾರೆ. ಅನುಭವಿ ರಾಜತಾಂತ್ರಿಕರಾಗಿರುವ ರಾಯಭಾರಿ ಚೋ ಹ್ಯುನ್, ಈ ಹಿಂದೆ ವಿಶ್ವಸಂಸ್ಥೆಯಲ್ಲಿ ದಕ್ಷಿಣ ಕೊರಿಯಾದ ಖಾಯಂ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ್ದರು ಮತ್ತು ಜಗತ್ತಿನಾದ್ಯಂತ ಪ್ರಮುಖ ರಾಜತಾಂತ್ರಿಕ ಪಾತ್ರಗಳನ್ನು ನಿರ್ವಹಿಸಿದ್ದಾರೆ.

><><><><><><><><

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಇಂದು ಬೆಳಿಗ್ಗೆ ಲಘು ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ ೩.೧ ತೀವ್ರತೆ ಕಂಡುಬಂದಿದೆ.  ಭೂಕಂಪದ ಕೇಂದ್ರಬಿಂದು ಕಿಶ್ತ್ವಾರ್ ಬಳಿ ಕಂಡು ಬಂದಿದೆ ಆದಾಗ್ಯೂ, ಯಾವುದೇ ಜೀವಹಾನಿ ಅಥವಾ ಆಸ್ತಿಪಾಸ್ತಿಗೆ ಹಾನಿಯಾದ ಬಗ್ಗೆ ವರದಿಯಾಗಿಲ್ಲ.

><><><><><><><><

ಭಾರತದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಮೊಣಕಾಲಿನ ಗಾಯದಿಂದಾಗಿ ಭಾರತ-ಇಂಗ್ಲೆಂಡ್ ನಡುವಿನ ಉಳಿದ ಎರಡು ಟೆಸ್ಟ್ ಪಂದ್ಯಗಳಿಂದ ಹೊರಗುಳಿಯಲಿದ್ದಾರೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ದೃಢಪಡಿಸಿದೆ. ಇನ್ನೂ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್ ಕೂಡ ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್‌ನಿಂದ ಹೊರಗುಳಿದಿದ್ದಾರೆ. ಭಾರತ ಮತ್ತು ಇಂಗ್ಲೆಂಡ್ ನಡುವೆ ಇದೇ ೨೩ರಂದು ಮ್ಯಾಂಟೆಪುರ್‌ನಲ್ಲಿ ನಾಲ್ಕನೇ ಟೆಸ್ಟ್ ಪಂದ್ಯ ನಡೆಯಲಿದೆ.

><><><><><><><><

ಜಾರ್ಜಿಯಾದ ಬಟುಮಿಯಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ಚೆಸ್ ವಿಶ್ವಕಪ್‌ನಲ್ಲಿ ಭಾರತದ ಅಂತಾರಾಷ್ಟ್ರೀಯ ಮಾಸ್ಟರ್ ದಿವ್ಯಾ ದೇಶ್‌ಮುಖ್ ಹಾಗೂ ಗ್ರ್ಯಾಂಡ್ ಮಾಸ್ಟರ್ ಹರಿಕಾ ದ್ರೋಣವಲ್ಲಿ ನಿನ್ನೆ ನಡೆದ ೨ ಪಂದ್ಯಗಳಲ್ಲಿ ಸಮಬಲ ಸಾಧಿಸಿದ್ದು, ಇಂದು ನಡೆಯಲಿರುವ ಟೈಬ್ರೆಕರ್ ಪಂದ್ಯದಲ್ಲಿ ಸೆಮಿಫೈನಲ್ ಹಂತಕ್ಕೇರಲು ಸೆಣಸಾಟ ನಡೆಸಲಿದ್ದಾರೆ. ಈ ಪಂದ್ಯ ಭಾರತೀಯ ಕಾಲಮಾನ ಇಂದು ಸಂಜೆ ೪.೩೫ಕ್ಕೆ ಆರಂಭವಾಗಲಿದೆ. ಭಾರತದ ಗ್ರ್ಯಾಂಡ್‌ಮಾಸ್ಟರ್ ಕೊನೆರೂ ಹಂಪಿ ಸೆಮಿಫೈನಲ್ ಹಂತಕ್ಕೇರಿದ್ದಾರೆ. ಆ ಮೂಲಕ ಈ ಹಂತ ತಲುಪಿದ ಮೊದಲ ಭಾರತ ಮಹಿಳೆ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ. ಕ್ವಾಟರ್ ಫೈನಲ್‌ನಲ್ಲಿ ಹಂಪಿ ಚೀನಾದ ಸಾಂಗ್ ಯುಕ್ಸಿನ್ ಅವರನ್ನು ಸೋಲಿಸಿದರು.  ಕ್ವಾಟರ್ ಫೈನಲ್ ಹಂತದಲ್ಲಿ ಕಣಕ್ಕಿಳಿದಿರುವ ಮತ್ತೋರ್ವ ಭಾರತೀಯ ಗ್ರ್ಯಾಂಡ್ ಮಾಸ್ಟರ್ ವೈಶಾಲಿ ರಮೇಶ್‌ಬಾಬು ೩ನೇ ಶ್ರೇಯಾಂಕಿತ ಚೀನಾದ ಟ್ಯಾನ್‌ಝೂಂಗ್ಯಿ ವಿರುದ್ಧ ಸೋಲನುಭವಿಸಿದರು.

><><><><><><><><

ಕರಾವಳಿ ಕರ್ನಾಟಕ, ಹಿಮಾಚಲಪ್ರದೇಶ, ತೆಲಂಗಾಣ ಉತ್ತರಾಖಂಡದ ಕೆಲವೆಡೆ ಇಂದು ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ತಮಿಳುನಾಡಿನಲ್ಲಿ ನಾಳೆಯವರೆಗೆ ಮತ್ತು ತೆಲಂಗಾಣದಲ್ಲಿ ಇದೇ ೧೪ ರವರೆಗೆ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ಕೇರಳ, ಮಾಹೆ, ಕರಾವಳಿ ಮತ್ತು ದಕ್ಷಿಣ ಒಳನಾಡಿನಲ್ಲಿ ಇದೇ ೧೮ ರವರೆಗೆ ಭಾರೀ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

><><><><><><><><